ದಿನಾಂಕ 20-02-2026 ರಂದು ಸಾಕ್ಷಿಯನ್ನು ಕರೆಯಿಸಿ ಮುಖ್ಯ ವಿಚಾರಣೆಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲು: ಅರ್ಜಿದಾರರ ಪರ ವಕೀಲರಿಂದ**

1. ನಾನು 2011 ರಲ್ಲಿ ಅರ್ಜಿದಾರಳೊಂದಿಗೆ ಮದುವೆ ಆಗಿದ್ದೆ. ತಿಂಗಳು, ತಾರೀಖು ನೆನಪಿಲ್ಲ. ಮದುವೆಯಾದ 7-8 ತಿಂಗಳವರೆಗೆ ನಿಮ್ಮಿಬ್ಬರ ವೈವಾಹಿಕ ಜೀವನ ಚೆನ್ನಾಗಿತ್ತು ಎಂದರೆ ಸರಿ. ಮದುವೆಯಾದ ನಂತರ ನೀವು, ನಿಮ್ಮ ತಂದೆ, ತಾಯಿ, ಸಹೋದರ, ಸಹೋದರಿ ಎಲ್ಲರೂ ಒಟ್ಟಿಗೆ ಇದ್ದಿರಿ ಎಂದರೆ ಸರಿ.

2. ಮದುವೆಯಾದ 7-8 ತಿಂಗಳ ನಂತರ ನೀವು ನಿಮ್ಮ ಹೆಂಡತಿಗೆ ಕಿರುಕುಳ ಕೊಡುವುದು, ಅನುಮಾನ ಪಡುವುದು ಮಾಡುತ್ತಿದ್ದಿರಿ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ಅರ್ಜಿದಾರಳು ನಿಮ್ಮ ತಂದೆ ತಾಯಿಗೆ ಹೇಳಿದಾಗ, ಅವರು ಅರ್ಜಿದಾರಳಿಗೆ ಬೈದು ಸುಮ್ಮನಿರಲು ಹೇಳಿ, ನಿಮ್ಮ ಈ ಬುದ್ಧಿಯನ್ನು ಸಮರ್ಥಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅವಾಚ್ಯವಾಗಿ ಬೈಯ್ಯುವುದು, ಹೊಡೆಯುವುದು, ಮನೆಯಿಂದ ಹೊರಹಾಕುವುದು ಮಾಡುತ್ತಿದ್ದಿರಿ ಎಂದರೆ ಸರಿಯಲ್ಲ.

3. ಅರ್ಜಿದಾರಳಿಗೆ ನಿಮ್ಮನ್ನು ಹೊರತುಪಡಿಸಿ ಲಿಂಗಸೂಗೂರಿನಲ್ಲಿ ಬೇರೆ ಯಾರೂ ಪರಿಚಯ ಇರಲಿಲ್ಲ ಎಂದರೆ ಸರಿ. ಅರ್ಜಿದಾರಳಿಗೆ ದುಬಿನ್ ನಾಯಕ್ ಎಂಬ ಮಗನಿದ್ದಾನೆ ಎಂದರೆ ಸರಿ. ಆತನನ್ನು ನೀವು ಭೇಟಿಯಾಗುವ ಪ್ರಯತ್ನ ಮಾಡಿದ್ದೀರಾ, ಆತನನ್ನು ನೋಡಿದ್ದೀರಾ ಎಂದರೆ ನಾನು ನ್ಯಾಯಾಲಯದಲ್ಲಿ ಮಾತ್ರ ನೋಡಿರುತ್ತೇನೆ ಎನ್ನುತ್ತಾರೆ. ನಿಮ್ಮ ಮಗನ ವಿದ್ಯಾಭ್ಯಾಸ ಏನು ಎಂದು ನಾನು ತಿಳಿದುಕೊಂಡಿಲ್ಲ. ಆತನಿಗೆ ಈಗ ಎಷ್ಟು ವರ್ಷ ಎಂದರೆ ಸಾಕ್ಷಿಯು 12-13 ವರ್ಷ ಇರಬಹುದು ಎನ್ನುತ್ತಾರೆ. ನನ್ನ ಮಗ ಸಿಂಧನೂರಿನಲ್ಲಿ ಓದುತ್ತಿದ್ದಾನೆ. ಆತನ ಶಾಲಾ ಶುಲ್ಕ ಎಷ್ಟು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ನಾನು ಜೀವನಾಂಶ ಕೊಡುತ್ತಿದ್ದೇನೆ, ಆದ್ದರಿಂದ ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ ಎನ್ನುತ್ತಾರೆ. ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಡಿವೋರ್ಸ್ ಪ್ರಕರಣ ಇತ್ತು, ಮಸ್ಕಿ ನ್ಯಾಯಾಲಯದಲ್ಲಿ ಒಂದು ಪ್ರಕರಣ ಇತ್ತು, ಅವುಗಳಲ್ಲಿ ಕೊಡುತ್ತಿದ್ದೇನೆ ಎನ್ನುತ್ತಾರೆ.

4. ಅರ್ಜಿದಾರಳು 2021 ರಲ್ಲಿ ಲಿಂಗಸೂಗೂರಿನಲ್ಲಿ ಒಂದು ಜೀವನಾಂಶದ ಕೇಸು ಹಾಕಿದ್ದಾರೆ ಎಂದರೆ ಸರಿ. ಸದರಿ ಕೇಸಿನ ನಂ 432/2021 ಎಂದರೆ ಸರಿ. ಮೊದಲು ಅದನ್ನು ಲಿಂಗಸೂಗೂರಿನಲ್ಲಿ ಹಾಕಿದ್ದರು, ಈಗ ಅದು ಮಸ್ಕಿಯಲ್ಲಿ ನಡೆಯುತ್ತಿದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ರೂ.6,000/- ಜೀವನಾಂಶದ ಆದೇಶ ಆಗಿರುತ್ತದೆ. ಇಲ್ಲಿಯವರೆಗೂ ರೂ.6,000/- ಮಾತ್ರ ಕಟ್ಟಿರುತ್ತೀರಿ, ಉಳಿದ ಹಣವನ್ನು ಕಟ್ಟಿಲ್ಲ ಎಂದರೆ ಸರಿಯಲ್ಲ. ಅಂದಾಜು ಎಷ್ಟು ಹಣ ಕಟ್ಟಿದ್ದೀರಿ ಎಂದರೆ ಸಾಕ್ಷಿಯು ಚೆಕ್ ಮಾಡಬೇಕು ಎನ್ನುತ್ತಾರೆ. ನೀವು ರೂ. 6000/- ಮಾತ್ರ ಕಟ್ಟಿದ್ದೀರಿ ಆದ್ದರಿಂದ ನಿಮಗೆ ಗೊತ್ತಿಲ್ಲ ಎನ್ನುತ್ತಿದ್ದೀರಿ ಎಂದರೆ ಸರಿಯಲ್ಲ.

5. ನೀವು ಲಿಂಗಸೂಗೂರು ಏರ್ ಟೆಲ್ ಟವರ್‌ನಲ್ಲಿ ಇಂಜಿನಿಯರ್ ಎಂದು ಕಾರ್ಯ ನಿರ್ವಹಿಸುತ್ತಿದ್ದೀರಿ ಎಂದರೆ ಸಾಕ್ಷಿಯು ಇಲ್ಲ ನಾನು ಕೂಲಿ ಕೆಲಸ ಮಾಡುತ್ತಿದ್ದೇನೆ ಎನ್ನುತ್ತಾರೆ. ನಿಮಗೆ ಪ್ರತಿ ತಿಂಗಳು ರೂ.50,000/- ಸಂಬಳ ಬರುತ್ತಿದೆ ಎಂದರೆ ಸಾಕ್ಷಿಯು ಇಲ್ಲ ರೂ.16,000/- ಬರುತ್ತದೆ ಎನ್ನುತ್ತಾರೆ.

6. ನಿಮ್ಮ ತಂದೆ ನಿವೃತ್ತ ಸರ್ಕಾರಿ ನೌಕರ, ಅವರಿಗೂ ಸಹ ಪಿಂಚಣಿ ವೇತನ ಬರುತ್ತಿದೆ ಎಂದರೆ ಸರಿಯಲ್ಲ. ನಿಮ್ಮ ಸಹೋದರ ಸಹ ಲಿಂಗಸೂಗೂರು ಏರ್ ಟೆಲ್ ಟವರ್‌ನಲ್ಲಿ ಇಂಜಿನಿಯರ್ ಎಂದು ಕಾರ್ಯ ನಿರ್ವಹಿಸುತ್ತಿದ್ದೀರಿ ಎಂದರೆ ಸರಿಯಲ್ಲ.

7. ನೀವು, ನಿಮ್ಮ ತಂದೆ, ತಾಯಿ, ಸಹೋದರ, ಸಹೋದರಿಯರು ಸೇರಿ ಅರ್ಜಿದಾರಳಿಗೆ ಹೆಚ್ಚಿನ ರೂ.5 ಲಕ್ಷ ವರದಕ್ಷಿಣೆಯನ್ನು ತೆಗೆದುಕೊಂಡು ಬರುವಂತೆ ಕಿರಿಕಿರಿ ಕೊಡುತ್ತಿದ್ದಿರಿ ಎಂದರೆ ಸರಿಯಲ್ಲ. ಸದರಿ ವಿಷಯವಾಗಿ ಜುಲೈ-2021 ರಲ್ಲಿ ಒಂದು ಬಾರಿ ಪಂಚಾಯತಿ ಆಗಿತ್ತು ಎಂದರೆ ಸರಿಯಲ್ಲ. ಆಗಸ್ಟ್ 2021 ರಲ್ಲಿ ನೀವು ನಿಮ್ಮ ಹೆಂಡತಿ ಮನೆಗೆ ಹೋಗಿ ನೀವು ರೂ.5 ಲಕ್ಷ ವರದಕ್ಷಿಣೆ ಕೊಡಬೇಕು ಇಲ್ಲವಾದರೆ ನಾನು ಇನ್ನೊಂದು ಮದುವೆ ಮಾಡಿಕೊಳ್ಳುತ್ತೇನೆ ಎಂದು ಬೆದರಿಕೆ ಹಾಕಿದ್ದಿರಿ ಎಂದರೆ ಸರಿಯಲ್ಲ.

8. ನಿಮ್ಮ ಮಗಳ ವಯಸ್ಸು ಎಷ್ಟು ಎಂದರೆ ಸಾಕ್ಷಿಯು ನನಗೆ ಇರುವುದು ಒಬ್ಬ ಮಗ ಮಾತ್ರ ಎನ್ನುತ್ತಾರೆ.

9. ನನ್ನ ಸೋದರ ಮಾವ ಅಜ್ಜಪ್ಪ ನಾಯಕ್ ರವರು ಮುದ್ದೇಬಿಹಾಳದಲ್ಲಿರುತ್ತಾರೆ. ನೀವು ಅವರ ಮಗಳನ್ನೇ ಮದುವೆಯಾಗಿದ್ದೀರಿ, ನಿಮಗೆ 5-6 ವರ್ಷದ ಮಗಳಿದ್ದಾಳೆ ಎಂದರೆ ಸರಿಯಲ್ಲ.

10. ನೀವು ಅರ್ಜಿದಾರಳನ್ನು ಭೇಟಿಯಾಗಲು ಆಗಾಗ ಸಿಂಧನೂರಿಗೆ ಬಂದು ಹೋಗುತ್ತಿದ್ದಿರಿ ಎಂದರೆ ಸರಿಯಲ್ಲ. ಅರ್ಜಿದಾರಳು ನಿಮಗೆ ಫೋನ್ ಮಾಡಿ ಕರೆದಾಗ ನೀವು ಬಂದು ಹೋಗುತ್ತಿದ್ದಿರಿ ಎಂದರೆ ಸರಿಯಲ್ಲ.

11. ನಿಮ್ಮ ಮಗನಿಗೆ ಒಂದು ವರ್ಷದ ಶಾಲಾ ಶುಲ್ಕ ರೂ.1,85,000/- ಇದೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಮಗನ ಬಗ್ಗೆ ತಿಳಿದು ಕೊಳ್ಳುವ ಜವಾಬ್ದಾರಿ ನಿಮ್ಮ ಮೇಲಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತಿಳಿದುಕೊಳ್ಳುವ ಕುತೂಹಲ ನನಗೂ ಇದೆ, ಅವರು ನೋಡಲು ಬಿಟ್ಟರೆ ತಿಳಿದುಕೊಳ್ಳುತ್ತೇನೆ ಎನ್ನುತ್ತಾರೆ. ಅರ್ಜಿದಾರಳು ಸಾಕಷ್ಟು ಬಾರಿ ನಿಮಗೆ ನೋಡುವ ಅವಕಾಶ ಕೊಟ್ಟರೂ ನೀವು ಬಂದು ನೋಡಿಲ್ಲ ಎಂದರೆ ಸರಿಯಲ್ಲ.

12. ನಮ್ಮ ಕುಟುಂಬಕ್ಕೆ ಯಾವುದೇ ಕೃಷಿ ಜಮೀನು ಇರುವುದಿಲ್ಲ. ಅರ್ಜಿದಾರಳ ಕುಟುಂಬದವರಿಗೆ ಯಾವುದೇ ಆದಾಯ ಇಲ್ಲ ಎಂದರ ಸರಿಯಲ್ಲ. ಅರ್ಜಿದಾರಳ ತಂದೆ ನಮ್ಮ ಮದುವೆ ಆದ ನಂತರ ನಿವೃತ್ತರಾಗಿರುತ್ತಾರೆ.

13. ನಿಮ್ಮೊಂದಿಗೆ ನಿಮ್ಮ ತಂದೆ, ತಾಯಿ, ಸಹೋದರ, ಸಹೋದರಿಯರು ಸಹ ಅವಾಚ್ಯ ಶಬ್ದಗಳಿಂದ ಬೈಯ್ಯುವುದು ಮಾಡುತ್ತಿದ್ದರು ಎಂದರೆ ಸರಿಯಲ್ಲ.

ಅರ್ಜಿದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಿಂಧನೂರು.

Advocate for respondent filed application U/o13 rule 1 R/W Sec. 151 of CPC prays for permission of the court to furnish list with documents.

Petitioner and their counsel called out absent, no representation. Hence, objections taken as not filed.

Heard, perused, wherein it appears that the documents are medical documents hence the application allowed.

Respondent present and filed his examination in chief and got examined as RW-1 and got marked Ex.P-1 to 6.

Advocate for petitioner prays time for cross of RW-1. Time is granted, RW-1 is deferred.

For cross of RW-1 by 09-08-2024.

**Prl., Civil Judge & JMFC.,**
**Sindhanur.**